2020-21 ನೇ ಸಾಲಿನ ವಾರ್ಷಿಕ ವರದಿ

ಓಂ ಸಹನಾವವತ್ತು ಸಹನೌಬುನಕ್ತು

ನಮ್ಮ ಸಂಸ್ಥೆಯ ಲಾಂಛನವನ್ನು ಸ್ಮರಿಸುತ್ತಾ ಜಗತ್ತಿಗೆ ಕಾಡುತ್ತಿರುವ ಕೋವಿಡ್-19 ಮಹಾ ರೋಗದಿಂದ ಕಂಗೆಟ್ಟ ಜನತೆ ತಮ್ಮ ಮಕ್ಕಳನ್ನು ಶಿಕ್ಷಣದಿಂದ ವಂಚಿಸಲು ಬಿಡಲಿಲ್ಲ ತಮಗೆ ಕಷ್ಟವಾದರೂ ಬಡವರು, ಕೂಲ ಕಾರ್ಮಿಕರು ತಮ್ಮ ಮಕ್ಕಳಿಗೆ ಸ್ಮಾರ್ಟ್ ಫೋನ್ ಕೊಡಿಸಿ ಆನ್ ಲೈನ್ ತರಗತಿಗಳಿಗೆ ಪ್ರೋತ್ಸಾಹಿಸಿದ ಶೈಕ್ಷಣಿಕ ವರ್ಷ 2020-21. 2019-20 ರ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಅಂದರೆ 2020 ರಿಂದ ಪ್ರಾರಂಭವಾದ ಕೋವಿಡ್ ಮಹಾಮಾರಿ ಮಾರ್ಚ 14-2020 ರಿಂದ ಲಾಕ್‌ಡೌನ್‌ಗೆ ನಾಂದಿಹಾಡಿತು. ಹೀಗಾಗಿ ಅಲ್ಲಿಂದ ಎಲ್ಲ ಶೈಕ್ಷಣಿಕ ಚಟುವಟಿಕೆಗಳು ಅಷ್ಟಕ್ಕಷ್ಟೆ.ಆದರೂ ಸರಕಾರವು 2020- 21 ನೇ ಸಾಲಿನ ಶೈಕ್ಷಣಿಕ ವರ್ಷವನ್ನು 12-10-2020 ರಿಂದ ಆನ್‌ಲೈನ್ ತರಗತಿಗಳನ್ನು ಆರಂಭಿಸಲು ಸೂಚಿಸಿತು.

- 17-11-2021 ರಂದು ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಿಗೆ & ಸಿಬ್ಬಂದಿ ವರ್ಗದವರಿಗೆ ಎನ್.ಎಸ್.ಎಸ್. ಯುವರೆಡ್‌ಕ್ರಾಸ್, ರೆಡ್ ರಿಬ್ಬನ್ ಕ್ಲಬ್ & ಐ.ಕ್ಯೂ.ಎ.ಸಿ ತಾಲ್ಲೂಕಾ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಆರ್.ಟಿ.ಪಿ.ಸಿ.ಆರ್. ತಪಾಸಣೆ ಮಾಡಿಸಲಾಯಿತು.
- 22-12-2020 ರಂದು ರಾಷ್ಟ್ರೀಯ ಗಣಿತ ದಿನ ಡಿಸೆಂಬರ್ - 22 ಶ್ರೀನಿವಾಸ ಅಯ್ಯಂಗಾರ ರಾಮಾನುಜಂ ರವರ ಜನ್ಮದಿನ, ಈ ದಿನವನ್ನು ರಾಷ್ಟ್ರೀಯ ಗಣಿತ ದಿನವೆಂದು ಘೋಷಿಸಿದ ಪ್ರಯುಕ್ತ ಸರಳವಾಗಿ ಸಿಬ್ಬಂದಿ ವರ್ಗ, ಎನ್.ಎಸ್.ಎಸ್. ಘಟಕ ರೆಡ್‌ಕ್ರಾಸ್, ರೆಡ್ ರಿಬ್ಬನ್ ಕ್ಲಬ್ & ಐ.ಕ್ಯೂ.ಎ.ಸಿ ಕೋವಿಡ್ ಸಹಯೋಗದಲ್ಲಿ ನಿಯಮಾನುಸಾರ ಆಚರಿಸಲಾಯಿತು.
- 12-1-2021 ರ ಮಂಗಳವಾರದಂದು ಸ್ವಾಮಿ ವಿವೇಕಾನಂದರ 158 ನೇ ಜಯಂತಿಯ ಅಂಗವಾಗಿ "ರಾಷ್ಟ್ರೀಯ ಯುವದಿನ" ಕಾರ್ಯಕ್ರಮವನ್ನು ಪ್ರಾಚಾರ್ಯರಾದ ಪ್ರೊ. ಎಸ್.ಎ. ತಾಂಬೆಯವರ ಮಾರ್ಗದರ್ಶನದಂತೆ ಎನ್.ಎಸ್.ಎಸ್. ಯುವರೆಡ್‌ಕ್ರಾಸ್. ರೆಡ್‌ರಿಬ್ಬನ್‌ಕ್ಲಬ್ & ಐ.ಕ್ಯೂ.ಎ.ಸಿ ಸಹಯೋಗದಲ್ಲಿ ಸರಳವಾಗಿ ಆಚರಿಸಲಾಯಿತು.
- 16-01-2021 ರ ಶನಿವಾರದಂದು ನಮ್ಮ ಮಹಿಳಾ ಮಹಾವಿದ್ಯಾಲಯದ ಎನ್.ಎಸ್.ಎಸ್. ಘಟಕಗಳು, ಯುವರೆಡ್‌ಕ್ರಾಸ್, ರೆಡ್‌ರಿಬ್ಬನ್‌ಕ್ಲಬ್, ಐ.ಕ್ಯೂ.ಎ.ಸಿ & ಜೆ.ಸಿ.ಐ ಕ್ಲಬ್ ರಾಣೇಬೆನ್ನೂರು ಸಹಯೋಗದಲ್ಲಿ ರಾಣೇಬೆನ್ನೂರಿನ ಮಹಿಳಾ ವೈದ್ಯಾಧಿಕಾರಿ ಡಾ. ವಿದ್ಯಾ ಕೇಲಗಾರರವರ ತಂಡ ನಮ್ಮ ವಿದ್ಯಾರ್ಥಿನಿಯರಿಗೆ ಆವಶ್ಯಕವಿರುವ ಆರೋಗ್ಯದ ಸಲಹೆ ನೀಡಲಾಯಿತು.
- 24-1-2021 ರಂದು ರವಿವಾರ "ರಾಷ್ಟ್ರೀಯ ಹೆಣ್ಣು ಮಕ್ಕಳ" ದಿನವನ್ನು ವಿದ್ಯಾರ್ಥಿನಿಯರಿಗೆ ಶುಭಾಷಯಗಳೊಂದಿಗೆ ಹಾರೈಸಲಾಯಿತು.

Scanned with CamScanner

- 25-1-2021 ರ ಸೋಮವಾರ "ರಾಷ್ಟ್ರೀಯ ಮತದಾರರ ದಿನ " ಕಾರ್ಯಕ್ರಮವನ್ನು ಪ್ರತಿಜ್ಞಾ ವಿಧಿ ಸ್ವೀಕರಿಸಿ ಮತದಾನದ ಮಹತ್ವವನ್ನು ಜನತೆಗೆ ಮುಟ್ಟುವಂತೆ ಮಾಡುತ್ತೇವೆಂದು ಪ್ರತಿಜ್ಞಾ ಮಾಡಲಾಯಿತು.ಸಹಯೋಗಎನ್.ಎಸ್.ಎಸ್. ಘಟಕ, ಯುವರೆಡ್ ಕ್ರಾಸ್& ಐಕ್ಯೂಎಸಿ

- 26-01-2021 ರ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ಸನ್ಮಾನ್ಯ ಶ್ರೀ. ರುದ್ರಪ್ಪ ಎಮ್. ಲಮಾಣಿಯವರು ನೇರವೇರಿಸಿದರು. ಅಧ್ಯಕ್ಷತೆಯನ್ನು ಕಾರ್ಯದರ್ಶಿಗಳು / ಆಡಳತಾಧಿಕಾರಿಗಳು ಆದ ಡಾ. ಆರ್.ಎಂ. ಕುಬೇರಪ್ಪ ನವರು ವಹಿಸಿದ್ದರು.ಸಮೂಹ ಸಂಸ್ಥೆಯ ಎಲ್ಲ ವಿಭಾಗಗಳ ಮುಖ್ಯಸ್ಥರು / ಸಿಬ್ಬಂದಿ ವರ್ಗ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಎನ್.ಎಸ್.ಎಸ್. ಘಟಕಗಳು, ಯುವರೆಡ್‌ಕ್ರಾಸ್, ರೆಡ್ ರಿಬ್ಬನ್ ಕ್ಲಬ್ & ಐಕ್ಯೂಎಸಿ ಸಹಯೋಗದಲ್ಲಿ ಕೋವಿಡ್ ನಿಯಮ ಪಾಲಿಸಿ ಆಚರಿಸಲಾಯಿತು.

- 19-02-2021 ರ ಶುಕ್ರವಾರ 2020-21 ನೇ ಸಾಲಿನ ವಿದ್ಯಾರ್ಥಿನಿ ಒಕ್ಕೂಟ ಎನ್.ಎಸ್.ಎಸ್. ಯುವರೆಡ್‌ಕ್ರಾಸ್ & ರೆಡ್‌ರಿಬ್ಬನ್‌ಕ್ಲಬ್‌ನ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಕೋವಿಡ್ ನಿಯಮ ಪಾಲಿಸಿ ಆಚರಿಸಲಾಯಿತು. ಗ್ರಾಮೀಣ ವೃತ್ತ ನೀರಿಕ್ಷಕರು (ಸಿ.ಪಿ.ಐ) ಆದ ಶ್ರೀಮತಿ. ಭಾಗ್ಯವತಿ ಭಂತಿಯವರು ಸನ್ಮಾನ ಸ್ವೀಕರಿಸಿ ಮಹಿಳಾ ಸಬಲೀಕರಣದ ಮಹತ್ವ ಉಪದೇಶಿಸಿದರು ಸಂಸ್ಥೆಯ ಅಧ್ಯಕ್ಷರು, ಆಡಳತಾಧಿಕಾರಿಗಳು / ಕಾರ್ಯದರ್ಶಿಗಳು ಪ್ರಾಚಾರ್ಯರು & ಸಿಬ್ಬಂದಿ ವರ್ಗ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

- 08-03-2021 ರ ಸೋಮವಾರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಎನ್.ಎಸ್.ಎಸ್. ಘಟಕಗಳು, ಯುವರೆಡ್‌ಕ್ರಾಸ್, ರೆಡ್‌ರಿಬ್ಬನ್‌ಕ್ಲಬ್ & ಐಕ್ಯೂಎಸಿ ಅಧೀನದಲ್ಲಿ ಆಚರಿಸಲಾಯಿತು.

- 14-3-2021 ರ ಭಾನುವಾರ ಕೋಟಿಗಾಯತ್ರಿ ಮಹಾಯಜ್ಞದ ಸವಿನೆನಪಿಗಾಗಿ 15 ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ನಮ್ಮ ಮಹಿಳಾ ಮಹಾವಿದ್ಯಾಲಯ & ಗಾಯತ್ರಿ ತಪೋಭೂಮಿ ತಡಸ ಸಹಯೋಗದೊಂದಿಗೆ ನಮ್ಮ ಸಂಸ್ಥೆಯಲ್ಲಿ ಆಚರಿಸಲಾಯಿತು. ಎನ್.ಎಸ್.ಎಸ್. ಸ್ವಯಂ ಸೇವಕಿಯರು ಕಾರ್ಯನಿರ್ವಹಿಸಿದರು.

- ದಿ: 19-3-2021 ರ ಶುಕ್ರವಾರ ಶ್ರೀ. ರಾಮಕೃಷ್ಣ ವಿವೇಕಾನಂದ ಆಶ್ರಮ ರಾಣೇಬೆನ್ನೂರನಲ್ಲಿ 16 ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು 19,20,21-03-2021 ರಂದು ಆಯೋಜಿಸಿದ್ದರು. ಈ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ದಿನ ಸಂಪೂರ್ಣ ನಮ್ಮ ಮಹಿಳಾ ಮಹಾವಿದ್ಯಾಲಯದ ಎನ್.ಎಸ್.ಎಸ್. ಸ್ವಯಂಸ ಸೇವಕಿಯರು ಭಾಗವಹಿಸಿ ಕಾರ್ಯನಿರ್ವಹಿಸಿದರು.

- 28-02-2021 ರ ವರೆಗೆ 4ನೇ ಸೆಮಿಸ್ಟರ್ ತರಗತಿಗಳು 30-03-2021 ರ ವರೆಗೆ 1 & 3 ಸೆಮಿಸ್ಟರ್ ನಂತರ ಪರೀಕ್ಷಾ ರಜೆ. 15-03-2021 ರಿಂದ 31-3-2021 ರ ವರೆಗೆ 5 ಸೆಮಿಸ್ಟರ್‌ನ ಪರೀಕ್ಷೆಗಳು ನಡೆದವು. 2, 4& 6 ನೇ ಸ ಸೆಮಿಸ್ಟರನ ಅವಧಿ ಪ್ರಾರಂಭ ಆದರೆ, ಕರ್ನಾಟಕ ಸರಕಾರದ ಆದೇಶ 27-4-2021 ರನ್ವಯಕೋವಿಡ್– 19 ಅಲೆ ಹಿನ್ನಲೆ ದಿ: 28-4-2021 ರಿಂದ ದಿ: 10-05-

Scanned with CamScanner

2021 ರ ವರೆಗೆ ಲಾಕ್‌ಡೌನ್ ಘೋಷಣೆ.ಅಕ್ಕಮಹಾದೇವಿ ವಿಶ್ವವಿದ್ಯಾಲಯದ ತಾತ್ಕಾಲಿಕ ವೇಳಾಪಟ್ಟಿಯ ಅಧಿಸೂಚನೆ ದಿ: 30-03-2021 ದಿ: 15-5-2021 ರಿಂದ 14-7-2021 ರ ವರೆಗೆ ಆನ್‌ಲೈನ್ ತರಗತಿಗಳು.ದಿ: 6-5-2021 ರ ಪ್ರಾಚಾರ್ಯರ ಮೀಟಿಂಗ್‌ನ ಆದೇಶದನ್ವಯ 10-05-2021 ರಿಂದಆನ್‌ಲೈನ್ ತರಗತಿಗಳನ್ನು ಪ್ರಾರಂಭಿಸಲಾಯಿತು.

- 8-5-2021 ರಂದು ಯುತ್‌ರೆಡ್‌ಕ್ರಾಸ್ ದಿನ ಎನ್.ಎಸ್.ಎಸ್. & ಐ.ಕ್ಯೂ.ಎ.ಸಿ ಸಹಯೋಗದಲ್ಲಿ ಆಚರಿಸಲಾಯಿತು.
- 21-06-2021 ಜೂನ್ 21 ರಂದು ವಿಶ್ವಯೋಗ ದಿನವನ್ನು ಸರಳವಾಗಿ ಕೊವಿಡ್ ನಿಯಮನುಸಾರ ಆಚರಿಸಲಾಯಿತು.
- 3 ಮತ್ತು 7-07- 2021 ರಂದು ತಾಲ್ಲೂಕಾ ಆರೋಗ್ಯ ಇಲಾಖೆ ರಾಣೆಬೆನ್ನೂರು ಮತ್ತು ನಮ್ಮ ಮಹಿಳಾ ಮಹಾವಿದ್ಯಾಲಯದಎನ್.ಎಸ್.ಎಸ್. ಘಟಕ, ಯುವರೆಡ್ ಕ್ರಾಸ್, ರೆಡ್‌ರಿಬ್ಬನ್‌ಕ್ಲಬ್ ಐ.ಕ್ಯೂ.ಎ.ಸಿ ಸಹಯೋಗದಲ್ಲಿ ಕೊವಿಡ್ -19 ರ ಉಚಿತ ಲಸಿಕಾ ಅಭಿಯಾನ (ಮೊದಲ ಡೋಸ್) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ನಮ್ಮ ವಿದ್ಯಾರ್ಥಿನಿಯರು ಸಿಬ್ಬಂದಿವರ್ಗದವರು ಲಸಿಕೆ ಹಾಕಿಸಿಕೊಂಡರು.
- 11-7-2021 ರಂದು ರವಿವಾರ "ವಿಶ್ವ ಜನಸಂಖ್ಯಾ ದಿನವನ್ನು" 12-7-2021 ಸೋಮವಾರ ಸರಳವಾಗಿ ಆಚರಿಸಲಾಯಿತು.
- ಒಂದು ಮತ್ತು ಮೂರನೇಯ ಸೆಮ್‌ನ ಪರೀಕ್ಷೆಗಳು 19-4-2021 ರಿಂದ ಪ್ರಾರಂಭವಾಗಬೇಕಿತ್ತು. ಆದರೆ ಕೊವಿಡ್ ಲಾಕ್‌ಡೌನ್ ಪ್ರಯುಕ್ತ ಮುಂದೂಡಲಾಯಿತು. ದಿ-26-7-2021 ರಿಂದ 2,4,6 ಸೆಮಿಸ್ಟರ್‌ಗಳ ತರಗತಿಗಳು ಪ್ರಾರಂಭ (ಆಫ್‌ಲೈನ್)ಆದರೆ 1 ಮತ್ತು 111 ಸೆಮ್ ಪರೀಕ್ಷೆಗಳಾದ ಕಾರಣ 2 & 4 ಸೆಮಿಸ್ಟರ್ ತರಗತಿಗಳ ಬದಲು ಪರೀಕ್ಷಾ ಪ್ರಶ್ನೆ ಪತ್ರಿಕೆಗಳನ್ನು ಚರ್ಚಿಸಲಾಯಿತು. ಅಂತಿಮ ವರ್ಷದವರಿಗೆ 6ನೇ ಸೆಮಿಸ್ಟರ್ ತರಗತಿ ಪ್ರಾರಂಭಿಸಲಾಯಿತು. ದಿ-2-8-2021 ರಿಂದ ದಿ-16-8-2021 ವರೆಗೆ 1 ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳು ನಡೆದವು.
- ಇತಿಹಾಸ ವಿಭಾಗ & ಐ.ಕ್ಯೂ.ಎ.ಸಿ ಅಡಿಯಲ್ಲಿ ನ್ಯಾಶನಲ್ ವೆಬಿನಾರ್ ಆರ್ಟ & ಆರ್ಕಿಟೆಕ್ಚರ್ ಆಫ್ ಮೊಗಲ ಎಂಪಾಯರ್
- 13-8-2021 ರಂದು ಎನ್.ಎಸ್.ಎಸ್, ಯುವರೆಡ್‌ಕ್ರಾಸ್, ರೆಡ್ ರಿಬ್ಬನ್ ಕ್ಲಬ್ ಮತ್ತು ಐ.ಕ್ಯೂ.ಎ.ಸಿ ಸಹಯೋಗದಲ್ಲಿ "ಫೀಟ್ ಇಂಡಿಯಾ 2.0" ಮತ್ತು "ಅಂತರಾಷ್ಟ್ರೀಯ ಯುವ ದಿನ " (12-8-2021) "ಆಜಾದ್ ಕಾ ಅಮೃತ ಮಹೋತ್ಸವ"ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೇರವೇರಿಸಲಾಯಿತು.
- 14-8-2021 ರಂದು 75ನೇ ಸ್ವಾತಂತ್ರ ದಿನಾಚರಣೆಯ ಹಿಂದಿನ ದಿನ ಸರಕಾರದ ಮತ್ತು ವಿಶ್ವವಿದ್ಯಾಲಯದ ಆದೇಶದಂತೆ "ಸ್ವಚ್ಛತಾ ಪಕ್ವಾಡ್" ಕಾರ್ಯಕ್ರಮವನ್ನು ಕಾಲೇಜು ಆವರಣದಲ್ಲಿ

Scanned with CamScanner

ಸ್ವಚ್ಛತೆ ಮಾಡುವ ಮೂಲಕ ಆಚರಿಸಲಾಯಿತು. ಸಹಯೋಗ ಎನ್.ಎಸ್.ಎಸ್. ಘಟಕಗಳು, ಐ.ಕ್ಯೂ.ಎ.ಸಿ, ರೆಡ್ ರಿಬ್ಬನ್ ಕ್ಲಬ್ & ಯುವರೆಡ್ ಕ್ರಾಸ್.

- 15-8-2021 ರಂದು ಬೆಳಗ್ಗೆ 7-35 ಕ್ಕೆ ಎನ್ಎಸ್.ಎಸ್. ಘಟಕಗಳು, ಯುವರೆಡ್ಕ್ರಾಸ್, ರೆಡ್ರಿಬ್ಬನ್ ಕ್ಲಬ್, ಐ.ಕ್ಯೂ.ಎ.ಸಿ, ಸಹಯೋಗದಲ್ಲಿ 75ನೇ ಸ್ವಾತಂತ್ರ ದಿನಾಚರಣೆಯ ಧ್ವಜಾರೋಹಣ ಕಾರ್ಯಕ್ರಮವನ್ನು ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ಆಡಳತಾಧಿಕಾರಿಗಳಾದ ಡಾ. ಆರ್.ಎಮ್.ಕುಬೇರಪ್ಪ ಸರ್ ನೆರವೇರಿಸಿದರು. ಆಡಳತ ಮಂಡಳಿಯ ಸದಸ್ಯರು ಎಲ್ಲ ವಿಭಾಗಗಳ ಮುಖ್ಯಸ್ಥರು ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.
- 17-8-2021 ಮಹಿಳಾ ವಿಶ್ವವಿದ್ಯಾಲಯದವರು 2022ರ ಜನೆವರಿ 26 ರಂದು ನಡೆಯುವ ಗಣರಾಜ್ಯೋತ್ಸವದ ರಾಜ್ಯ ಮತ್ತು ರಾಷ್ಟ್ರಮಟ್ಟದ ಆರ್ಡಿ ಪೆರೆಡ್ (ಪಥಸಂಚಲನ)ಗೆ ಆಯ್ಕೆ ಪ್ರಕ್ರಿಯೆಯನ್ನು ಹಮ್ಮಿಕೊಂಡಿದ್ದರು. ಮಹಾವಿದ್ಯಾಲಯದ ಎನ್.ಎಸ್.ಎಸ್. ಅಧಿಕಾರಿ ಶ್ರೀಮತಿ.ಡಾ: ಪುಷ್ಪಾಂಜಲಿ ಎನ್. ಕಾಂಬಳಿಯವರು 06 ವಿದ್ಯಾರ್ಥಿನಿಯರನ್ನು ಕರೆದುಕೊಂಡು ಹೋಗಿ ಭಾಗವಹಿಸಿದ್ದರು. ಇದರಲ್ಲಿ ಬಿ.ಕಾಂ ಅಂತಿಮ ವರ್ಷದ ಕು: ರಂಜಿತಾ ಗೌರಕ್ಕಳವರು ಆಯ್ಕೆಯಾಗಿದ್ದು ಸಂಸ್ಥೆಯ ಹೆಮ್ಮೆಯ ವಿಷಯ.
- 23-08-2021 ರಂದು ಎನ್.ಎಸ್.ಎಸ್.ಘಟಕಗಳು, ಯುವರೆಡ್ಕ್ರಾಸ್, ರೆಡ್ರಿಬ್ಬನ್ಕ್ಲಬ್ನ ಸಹಯೋಗದಲ್ಲಿ ಪ್ರತಿವರ್ಷ ಆಗಷ್ಟ್ 20 ದಿವಂಗತ ಮಾಜಿ ಪ್ರಧಾನಿ ರಾಜೀವ್ಗಾಂಧಿಯವರ ಹುಟ್ಟುಹಬ್ಬದ ಸವಿನೆನಪಿನ ಪ್ರಯುಕ್ತ "ಸದ್ಭಾವನಾ ದಿನ" ವನ್ನಾಗಿ ಆಚರಿಸಲಾಗುತ್ತದೆ. ಹಾಗೆಯೇ ಈ ವರ್ಷವು ಅಂದು ಸಾರ್ವತ್ರಿಕ ರಜೆ ಇದ್ದ ಕಾರಣ 23-08-2021 ರಂದು ವಿಶೇಷ ಉಪನ್ಯಾಸದೊಂದಿಗೆ ಕೋವಿಡ್ ನಿಯಮಾನುಸಾರ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಸುರೇಶ ಬಣಕಾರ ವಹಿಸಿದ್ದರು. ಸಿಬ್ಬಂದಿವರ್ಗ & ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.
- ದಿ: 21-08-2021 ರಂದು ದಿನಾಂಕ : 01-09-2021 ಕ್ಕೆ ರಾಜ್ಯ ಮಟ್ಟದ ಆನ್ಲೈನ್ ಮೂಲಕ ನಡೆಯುವ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ನಮ್ಮ ಮಹಿಳಾ ಮಹಾವಿದ್ಯಾಲಯದ ಪ್ರತಿ ನಿಧಿಯಾಗಿ ಕು : ಕಾವ್ಯಾ ಊದಗಟ್ಟಿ ಆಯ್ಕೆಯಾಗಿ ಭಾಗವಹಿಸುವರು.
- 31-08-2021 ರಂದು ಅಂದರೆ ಇಂದು ಕೋವಿಡ್ ಸಂದರ್ಭದ 2 ನೇ ಅಲೆಯನ್ನು ಧೈರ್ಯದಿಂದ ಎದುರಿಸುತ್ತಾ 2020-21 ನೇ ಸಾಲಿನ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಈ ಸಾಲಿನ ವಾರ್ಷಿಕ ವರದಿ ಓದುತ್ತಿರುವುದು ನನಗೆ ಹೆಮ್ಮೆ ಅನಿಸುತ್ತಿದೆ.

ಧನ್ಯವಾದಗಳು ಜೈಹಿಂದ್ ಕೈ ಕರ್ನಾಟಕ ಮಾತೆ.

Scanned with CamScanner